ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಿಹರ
**ಸಿ. ಸಿ. 27/2016**

ಪಿ. ಡಬ್ಲೂ. **45**

**ಸಿ.ಡಬ್ಲೂ. 57**

**ಹೆಸರುಃ** **ನಾಗಪ್ಪ.**

**ತಂದೆಃ** ದೊಡ್ಡಕಲ್ಲಪ್ಪ.

**ವಯಸ್ಸುಃ** **60** ವರ್ಷ.

**ಕೆಲಸಃ** ವ್ಯವಸಾಯ.

**ವಾಸಃ** ಲಕ್ಕಶೆಟ್ಟಿಹಳ್ಳಿ ಗ್ರಾಮ.

**ಇಂದು ದಿನಾಂಕ:22-12-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಎ.ಪಿ.ಪಿ ಯವರಿಂದಃ

ಅಂದಾಜು 10 ವರ್ಷಗಳ ಹಿಂದೆ ನಮ್ಮ ಹೊಲದಲ್ಲಿ ಬೆಳೆದ 120 ಚೀಲ ಭತ್ತವನ್ನು ನಂದಿತಾವರೆಯ ಶ್ರೀನೀವಾಸ ಮಿಲ್ ಗೆ ಭತ್ತವನ್ನು ಕೊಟ್ಟಿದ್ದೇವು. ಭತ್ತದ ಹಣವನ್ನು ನನ್ನ ಮಗನಿಗೆ ಕೊಟ್ಟಿದ್ದಾರೆ. ನನಗೆ ಇನ್ನು ಸ್ವಲ್ಪ ಭತ್ತದ ಹಣ ಬರಬೇಕಿದೆ. ಉಳಿದ ಹಣ ಕೊಡುತ್ತೇವೆಂದು ಹೇಳಿದ್ದು, ಹಣ ಕೊಟ್ಟಿರುವುದಿಲ್ಲ. ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ. ನನಗೆ ಆರೋಪಿತ ಪರಿಚಯವಿರುದಿಲ್ಲ.

ಎ.ಪಿ.ಪಿ ಯವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಬೇಕೆಂದು ಕೋರಿದ್ದಾರೆ.

PW-45

ಪಾಟೀ ಸವಾಲು ಶ್ರೀ ಎ.ಪಿ.ಪಿ ವಕೀಲರಿಂದಃ

ದಿನಾಂಕಃ22-02-2010 ಮತ್ತು 26-02-2010 ರಂದು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತನು ನಮ್ಮ ಗ್ರಾಮಕ್ಕೆ ಬಂದು, ನನ್ನ ಜಮೀನಿನಲ್ಲಿ ಬೆಳೆದ ಮತ್ತು ನಮ್ಮ ಗ್ರಾಮದ ಇತರ ರೈತರ ಭತ್ತವನ್ನು ನಂದಿತಾವರೆ ಗ್ರಾಮದ ಜೀವಿಕಾ ಎಲೆಕ್ಟ್ರಾನಿಕ್ ವೇ ಬ್ರಿಜ್ಡ್ ನಲ್ಲಿ ತೂಕ ಮಾಡಿಸಿ, ಶ್ರೀನಿವಾಸ್ ರೈಸ್ ಮಿಲ್ ಗೆ ತಂದು ರೈಸ್ ಮಿಲ್ ನಲ್ಲಿದ್ದ ಅದರ ಮಾಲೀಕಾರಾದ ನಾಗೇಶ್ವರ ರಾವ್ ಮತ್ತು ಆರೋಪಿತನು ನನ್ನ ಸಮಕ್ಷಮ ಭತ್ತವನ್ನು ಖರೀದಿಸಿ, ಒಂದು ತಿಂಗಳ ನಂತರ ರೂ.2,90,080/- ರೂಗಳನ್ನು ಕೊಡುವುದಾಗಿ ಹೇಳಿದ್ದರು ಎನ್ನುವುದು ಸರಿಯಲ್ಲ. ಆರೋಪಿತನು ನನ್ನಂತೆ ಕೆಲವರಿಗೆ ಅಲ್ಪ ಸ್ವಲ್ಪ ಹಣ ಕೊಟ್ಟು, ಉಳಿದ ಹಣ ಕೊಡುತ್ತೇವೆಂದು ನಂಬಿಸಿ ನನಗೆ ಮತ್ತು ಇತರ ರೈತರಿಗೆ ಮೋಸ ಮಾಡಿ, ಹಣ ಕೊಡದೇ ತಲೆಮರಿಸಿಕೊಂಡಿದ್ದ ಎನ್ನುವುದು ಸರಿಯಲ್ಲ. ಪೋಲೀಸರ ಮುಂದೆ ನಾನು ದಿನಾಂಕಃ05-07-2010 ರಂದು ಹೇಳಿಕೆ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿ.ಪಿ-38 ಎಂದು ಗುರುತಿಸಲಾಯಿತು. ನಾನು ಅರೋಪಿತನಿಗೆ ಸಹಾಯ ಮಾಡುವ ಉದ್ದೇಶದಿಂದ ಆತನ ಕೋರಿಕೆಯ ಮೇರೆಗೆ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**